ವಿಜಯವಾಣಿ
ಕನ್ನಡಿಗರ ಧ್ವನಿ

## ನಾಳೆಯಿಂದ ಜೈನ್ ಕ್ರೀಡಾ ಉತ್ಸವ

**ಬೆಂಗಳೂರು:** ಜೈನ್ ವಿಶ್ವವಿದ್ಯಾಲಯದ ಆಶ್ರಯದಲ್ಲಿ ಫೆ. 14-17ರ ವರೆಗೆ 'ಅಖಿಲ ಭಾರತ ಕ್ರೀಡಾ ಎಕ್ಸ್‌ಟ್ರಾವಗಾನ್ಜ ವಿಜಾಇ' ನಡೆಯಲಿದೆ. ಇದರ ಅಂಗವಾಗಿ ಬ್ಯಾಡ್ಮಿಂಟನ್, ಬಾಸ್ಕೆಟ್‌ಬಾಲ್, ಟೆನಿಸ್, ಕ್ರಿಕೆಟ್, ಹಾಕಿ, ಈಜು, ಟೇಬಲ್ ಟೆನಿಸ್ ಮತ್ತು ವಾಲಿಬಾಲ್ ಸ್ಪರ್ಧೆಗಳು ನಗರದ ವಿವಿಧ ತಾಣಗಳಲ್ಲಿ ಜರುಗಲಿವೆ. ಚೆನ್ನೈನ 16, ಶ್ರೀಲಂಕಾ ಮತ್ತು ಕೊಯಮತ್ತೂರಿನ ತಲಾ 2 ಕಾಲೇಜುಗಳು, ಮೈಸೂರು, ತಿರುಚಿ, ಈರೋಡ್, ಮಧುರೈ, ಕಣ್ಣೂರಿನ ತಲಾ ಒಂದು ಕಾಲೇಜು ತಂಡಗಳು ಕ್ರೀಡಾ ಉತ್ಸವದಲ್ಲಿ ಭಾಗವಹಿಸಲಿವೆ. 4 ದಿನಗಳ ಕಾಲ ನಡೆಯುವ 14ನೇ ವಿಜಾಇ ಕೂಟದಲ್ಲಿ ಸುಮಾರು 1,000ಕ್ಕೂ ಹೆಚ್ಚು ಕ್ರೀಡಾಪಟುಗಳು ಭಾಗವಹಿಸುವ ನಿರೀಕ್ಷೆ ಇದ್ದು, ಪ್ರತಿಷ್ಠಿತ ಅಣ್ಣಾಮಲೈ ಮತ್ತು ಎಸ್‌ಆರ್‌ಎಂ ವಿಶ್ವವಿದ್ಯಾಲಯ ಸೇರಿದಂತೆ ದೇಶದ ಅಗ್ರ ಕಾಲೇಜು ತಂಡಗಳು ಸ್ಪರ್ಧಿಸಲಿವೆ.